

tamiḷunāḍina nāyanār santaru – ೫


# ಸೋಮಾಸಿ ಮಾರ ನಾಯನಾರ್


ಕಥೆ : ಆರ್.ವಿ.
ಚಿತ್ರ : ಶಂಕರ್

**1** ತಿರುವಾರೂರಿನಲ್ಲಿ ಸುಂದರಮೂರ್ತಿ ನಾಯನಾರರ ಪತ್ನಿ ಪರವೈ ನಾಚಿ ತನ್ನ ಪತಿಗೆ ಊಟ ಬಡಿಸುತ್ತಿದ್ದಳು.









4
ಪರವೈ ನಿಮ್ಮ ಬಗ್ಗೆ ಹೇಳಿದ್ದಾಳೆ. ನೀವು ಪ್ರತಿದಿನವೂ ನಮಗೆ ತರಕಾರಿ, ಸೊಪ್ಪು ತಂದುಕೊಟ್ಟು ರುಚಿಕರವಾದ ಊಟ ಮಾಡಲು ಸಹಾಯ ಮಾಡಿದ್ದೀರಿ.
ಸ್ವಾಮಿ, ನನ್ನದೊಂದು ಪ್ರಾರ್ಥನೆ. ನಾನು ಸೋಮಯಾಗ ಮಾಡಬೇಕಾಗಿದೆ. ಭಗವಾನ್ ತ್ಯಾಗೀಶ ಶಿವನು ಸಾಕ್ಷಾತ್ತಾಗಿ ಬಂದು ನನ್ನ ಹವಿಸ್ಸನ್ನು ಸ್ವೀಕರಿಸಬೇಕೆಂಬುದೇ ನನ್ನಾಸೆ. ದಯವಿಟ್ಟು ಅವನಲ್ಲಿ ಪ್ರಾರ್ಥಿಸಿ, ನನಗೆ ಸಹಾಯ ಮಾಡಿ.
5
ಭಗವಾನ್ ತ್ಯಾಗೀಶನು ಭಕ್ತರೊಂದಿಗೆ ಆಟವಾಡುತ್ತಾನೆ. ಅವನು ಯಾವುದೇ ರೂಪದಲ್ಲಿ ಅಲ್ಲಿಗೆ ಬರಬಹುದು. ಅವನನ್ನು ನಾವು ಗುರುತಿಸಲಾಗದೆ ಹೋದರೆ ಒಳ್ಳೆಯದಲ್ಲ.
ದಯವಿಟ್ಟು ಭಗವಂತನು ಯಾಗಕ್ಕೆ ಬರುವಂತೆ ಮಾಡಿ. ಅವನು ಯಾವ ರೂಪದಲ್ಲಾದರೂ ಬರಲಿ. ನಾನು ಅವನ ಸೇವೆ ಮಾಡುತ್ತೇನೆ.
6
ಭಗವಂತನನ್ನು ತಾವು ಕರೆತರುವುದಾಗಿ ಸುಂದರರು ಮಾತುಕೊಟ್ಟರು. ಸೋಮಾಸಿ ಮಾರರು ತಮ್ಮ ಊರಿಗೆ ಹಿಂದಿರುಗಿ, ಸೋಮಯಾಗ ಮಾಡಲು ಬೇಕಾದ ಸಿದ್ಧತೆಗಳನ್ನೆಲ್ಲ ವಿಜೃಂಭಣೆಯಿಂದ ಮಾಡತೊಡಗಿದರು.
ಸ್ವಾಮಿ, ನನಗೇಕೋ ಭಯ. ಭಗವಂತನ ಪರೀಕ್ಷೆಯನ್ನು ನಾವು ಗೆಲ್ಲಬಲ್ಲೆವೆ?
ಚಿಂತಿಸಬೇಡ. ಅವನ ಪರೀಕ್ಷೆಯನ್ನು ಎದುರಿಸಲು ಅವನೇ ನಮಗೆ ಶಕ್ತಿ ನೀಡುವನು.

7




8 ಆಹುತಿ ನೀಡುವ ಸಮಯ ಬಂತು. ಆ ಕೂಡಲೇ ಅಲ್ಲಿ ಮದ್ದಳೆಯ ಧ್ವನಿ ಕೇಳಿಸಿತು.




9 ಮಹಾದ್ವಾರದ ಬಳಿ ಎಲ್ಲರೂ ನೋಡುತ್ತಿದ್ದಂತೆಯೆ ಆ ಚಂಡಾಲನು ಯಾಗಶಾಲೆಯನ್ನು ಪ್ರವೇಶಿಸಿದ.


10 ಯಾಗಶಾಲೆಯಲ್ಲಿದ್ದ ಬ್ರಾಹ್ಮಣರು ಹೊರಗೆ ಓಡಿಹೋದರು.




**11** ಸಾಕ್ಷಾತ್ ಶಿವನೇ ಚಂಡಾಲನ ವೇಷದಲ್ಲಿ ಅಲ್ಲಿಗೆ ಬಂದಿದ್ದ. ನಸುನಗುತ್ತ ಅವನು ಒಳಗೆ ಬಂದಿದ್ದ. ಆಗ ಅರ್ಚಕರು, ಮಹಿಳೆಯರು ಎಲ್ಲರೂ ದಂಗಾದರು. ಆಹುತಿಯನ್ನು ಕೈಯಲ್ಲಿ ಹಿಡಿದಿದ್ದ ಸೋಮಾಸಿ ಮಾರನು ಕಲ್ಲಿನ ವಿಗ್ರಹದಂತೆ ನಿಂತುಬಿಟ್ಟಿದ್ದ.




**12** ಸೋಮಾಸಿ ಮಾರನು ನಿಶ್ಚಿಂತನಾದ. ಪರಮಭಕ್ತಿಯಿಂದ ಚಂಡಾಲನ ರೂಪದಲ್ಲಿ ಬಂದ ಶಿವನಿಗೆ ಆಹುತಿ ನೀಡಿದ.




**13** ಭಗವಂತನು ತನ್ನ ದಿವ್ಯರೂಪವನ್ನು ಧರಿಸಿದ. ಸೋಮಾಸಿ ಮಾರನು ಆನಂದಭಾಷ್ಪಗಳನ್ನು ಸುರಿಸುತ್ತ ಸಾಷ್ಟಾಂಗ ನಮಸ್ಕಾರ ಮಾಡಿದ.




**14** ಅರುವತ್ತಮೂರು ನಾಯನಾರರುಗಳಲ್ಲಿ ಒಬ್ಬರಾದ ಸೋಮಾಸಿ ಮಾರರನ್ನು ಸ್ತುತಿಸುತ್ತ ಸುಂದರರು ಹೇಳುತ್ತಾರೆ : ''ಸೋಮಾಸಿ ಮಾರರ ದಾಸರ ದಾಸ ನಾನು.'

''ಶಿವನನ್ನು ಯಾರು ಲಿಂಗದಲ್ಲಿ ಮಾತ್ರವೇ ನೋಡುವರೋ ಅವರ ಪೂಜೆ ಮೊದಲ ಹಂತದ್ದು ಮಾತ್ರ. ಬಡವನಲ್ಲಿ ಶಿವನನ್ನು ಕಾಣುತ್ತ, ಅವನ ಜಾತಿ, ಕುಲ, ಜನಾಂಗ ಯಾವುದೆಂದು ನೋಡದೆ ಅವನ ಸೇವೆಯನ್ನು ಯಾರು ಮಾಡುತ್ತಾನೋ, ಅವನ ಮೇಲೆ ಶಿವನಿಗೆ, ಕೇವಲ ದೇವಾಲಯದಲ್ಲಿ ಮಾತ್ರ ದೇವರನ್ನು ಕಾಣುವವನಿಗಿಂತ ಹೆಚ್ಚು ಪ್ರೀತಿ. ಅವನಿಗೇ ದೇವರು ಒಲಿಯುವನು.''



– ಸ್ವಾಮಿ ವಿವೇಕಾನಂದ